# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 10/2019**

**ದೋ.ಸಾ. : 21 ಫ್ರಾ.ಸಾ. : 04**

| | | |
|---|---|---|
| ಸಾಕ್ಷಿಯ ಹೆಸರು | : | ಮೀನಾಕ್ಷಿ ಪ್ರೇಮಕುಮಾರ ನಾಯರ |
| ಗಂಡನ ಹೆಸರು | : | ಪ್ರೇಮಕುಮಾರ ನಾಯರ |
| ವಯಸ್ಸು | : | 36 ವರ್ಷ |
| ಕೆಲಸ | : | ಗೃಹಿಣಿ |
| ವಾಸ | : | ಅಲಿಗದ್ದ, ಬೈತಕೊಲ,ಕಾರವಾರ |

**ದಿನಾಂಕಃ 20-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಮೃತ ಪ್ರೇಮಕುಮಾರ ನನ್ನ ಗಂಡ. ಚಾಸಾ-1 ರವರು ನನ್ನ ತಂದೆ, ಅವರು 2019 ರ ಜುಲೈ ತಿಂಗಳಲ್ಲಿ ತೀರಿಕೊಂಡಿರುತ್ತಾರೆ. ಚಾಸಾ-19 ರವರು ನನ್ನ ಗಂಡನ ಅಣ್ಣ. ಚಾಸಾ-20 ನನ್ನ ತಮ್ಮ. ಈ ಘಟನಾ ಸಮಯದಲ್ಲಿ ನಾನು, ನನ್ನ ಗಂಡ ಹಾಗೂ ನನ್ನ 6 ವರ್ಷದ ಮಗಳು ಪೋರ್ಟ್ ಕಾಲೋನಿಯಲ್ಲಿ ವಾಸವಾಗಿದ್ದೆವು. ಈಗ ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿ ನನಗೆ ಗೊತ್ತು, ಆತ ನನ್ನ ಗಂಡನ ಸ್ನೇಹಿತ ಹಾಗೂ ಆತ ನಮ್ಮ ಮನೆಗೆ ಆಗಾಗ್ಗೆ ಬಂದು ಹೋಗುತ್ತಿದ್ದ. 2 ನೇ ಆರೋಪಿ ಸಹ ನನಗೆ ಗೊತ್ತು, ಆತನೂ ಸಹ 1 ನೇ ಆರೋಪಿಯೊಂದಿಗೆ ನಮ್ಮ ಮನೆಗೆ ಬಂದು ಹೋಗುತ್ತಿದ್ದ. 4 ನೇ ಆರೋಪಿ ನನಗೆ ಗೊತ್ತು, ಆತ ನಮ್ಮ ಮನೆಯಿಂದ ಸ್ವಲ್ಪ ದೂರದಲ್ಲಿ ವಾಸವಾಗಿದ್ದ ಹಾಗೂ ಆತ ಚಿಕ್ಕಂದಿನಿಂದ ನನಗೆ ಗೊತ್ತು ಹಾಗೂ ಆತ ನನ್ನ ಗಂಡನ ಬಳಿ ಟ್ಯೂಷನ್ ಗೆ ಬರುತ್ತಿದ್ದ. 5 ನೇ ಆರೋಪಿ ಸಹ ನನಗೆ ಗೊತ್ತು,ಆತ ನನ್ನ ಗಂಡನೊಂದಿಗೆ ಗೋವಾದಲ್ಲಿ ಬ್ಯುಸಿನೆಸ್ ಮಾಡುತ್ತಿದ್ದ ಹಾಗೂ 1 ನೇ ಆರೋಪಿಯ ಆಫೀಸ್ ನಲ್ಲಿ ಆತ ಇರುತ್ತಿದ್ದ ಹಾಗಾಗಿ ಆತನ ಪರಿಚಯ ಇರುತ್ತದೆ.

2. ಈ ಘಟನೆಯಾಗುವ ಪೂರ್ವದಲ್ಲಿ ನನ್ನ ಗಂಡ ಹಾಗೂ 1 ನೇ ಆರೋಪಿ ಶಿಪ್ಪಿಂಗ್ ಏಜೆನ್ಸಿ ನಡೆಸುವ ಸಲುವಾಗಿ ಯೋಜನೆ ರೂಪಿಸಿ, ಸಂಬಂಧಪಟ್ಟ ಪ್ರಾಧಿಕಾರಿಗಳಿಂದ ಅನುಮತಿಯನ್ನು ಪಡೆದುಕೊಂಡು, ಆ ನಂತರ ಇಬ್ಬರು ಸೇರಿ ಕಾರವಾರದ ಬಂದರಿನಲ್ಲಿ

ಹೊಸದಾಗಿ ಶಿಪ್ಪಿಂಗ್ ಏಜೆನ್ಸಿಯನ್ನು ಪ್ರಾರಂಭಿಸಿದರು. ಆ ನಂತರ 1 ನೇ ಆರೋಪಿ ನನ್ನ ಗಂಡನಿಗೆ ಜೊತೆಯಲ್ಲಿ ಶಿಪ್ಪಿಂಗ್ ಏಜೆನ್ಸಿಯನ್ನು ನಡೆಸುವುದು ಬೇಡ, ನಾನು ಒಬ್ಬನೇ ನೋಡಿಕೊಳ್ಳುತ್ತೇನೆಂದು ಹೇಳುತ್ತಿದ್ದ. ಈ ವಿಷಯದಿಂದ ನನ್ನ ಗಂಡನಿಗೆ ಬೇಜಾರಾಗಿರುತ್ತದೆ. ಆ ನಂತರ ಮಂಗಳೂರಿನ ಶರೀಪ್ ಎನ್ನುವರ ನನ್ನ ಗಂಡನಿಗೆ ಪೊಯಿನೂರ ಹೆಸರಿನಲ್ಲಿ ಹೊಸದಾಗಿ ಶಿಪ್ಪಿಂಗ್ ಏಜೆನ್ಸಿಯನ್ನು ಮಾಡಿಕೊಟ್ಟಿರುತ್ತಾರೆ ಹಾಗೂ ನನ್ನ ಗಂಡನ ಏಜೆನ್ಸಿ ಚೆನ್ನಾಗಿ ನಡೆಯುತ್ತಿರುತ್ತದೆ. 2 ನೇ ಆರೋಪಿ ನನ್ನ ಗಂಡನ ಶಿಪ್ಪಿಂಗ್ ಏಜೆನ್ಸಿ ಗೆ ಬರುತ್ತಿದ್ದು, ಅಲ್ಲಿ ನಡೆಯುತ್ತಿದ್ದ ವ್ಯವಹಾರಗಳನ್ನು 1 ನೇ ಆರೋಪಿಗೆ ತಿಳಿಸುತ್ತಿದ್ದ. ನನ್ನ ಗಂಡನ ವ್ಯವಹಾರವು ಚೆನ್ನಾಗಿ ನಡೆಯುತ್ತಿದ್ದ ಕಾರಣ, 1 ನೇ ಆರೋಪಿಯು ತನ್ನ ಏಜೆನ್ಸಿಯನ್ನು ಮುಚ್ಚಬೇಕಾಗುತ್ತದೆ ಎಂದು, ನನ್ನ ಗಂಡನನ್ನು ದ್ವೇಷಿಸುತ್ತಾ ಬಂದಿರುತ್ತಾನೆ.

3. ದಿಃ 16-10- 2018 ರಂದು ಮಧ್ಯಾಹ್ನ 01-30 ರ ಸುಮಾರಿಗೆ ನನ್ನ ಗಂಡನಿಗೆ 2 ನೇ ಆರೋಪಿಯು ಕರೆ ಮಾಡಿ, ಕದ್ರಾ ಬಳಿ ಒಂದು ಕಟ್ಟಿಗೆ ವ್ಯವಹಾರ ಉಂಟು, ಬೇಗ ಬಾ ಹೋಗಿ ಬರೋಣಾ ಎಂದು ಕರೆದನು. ಆಗ ನನ್ನ ಗಂಡ 2 ನೇ ಆರೋಪಿ ಹೇಳಿದ ವಿಷಯವನ್ನು ನನಗೆ ತಿಳಿಸಿ, ಹೋಗಿ ಬರುವುದಾಗಿ ಹೇಳಿ, ತನ್ನ ಬೈಕ್ ತೆಗೆದುಕೊಂಡು ಹೋದರು. ನನ್ನ ಗಂಡ ಹೋದ 2-3 ಗಂಟೆಗಳ ನಂತರ ನಾನು ನನ್ನ ಗಂಡನ ಮೊಬೈಲ್ ಗೆ ಕರೆ ಮಾಡಿದ್ದು, ಆತ ಕರೆಗಳನ್ನು ಸ್ವೀಕರಿಸಲಿಲ್ಲ, ಅದರಿಂದ ನನಗೆ ಗಾಬರಿಯಾಗಿ ನಿರಂತರವಾಗಿ ಕರೆ ಮಾಡುತ್ತಲೆ ಇದ್ದೆ ಹಾಗೂ 2 ನೇ ಆರೋಪಿಗೂ ಸಹ ಕರೆ ಮಾಡಿರುತ್ತೇನೆ, ಆದರೆ ಆತನೂ ಸಹ ಕರೆ ಸ್ವೀಕರಿಸಿರುವುದಿಲ್ಲ. ಸಂಜೆ 05-00 ರಿಂದ 05-30 ರ ಸುಮಾರಿಗೆ ನನ್ನ ಗಂಡನ ಮೊಬೈಲ್ ಕರೆ ಸ್ವೀಕರಿಸಿದ್ದು, ಆ ಕಡೆಯಿಂದ ಯಾರು ಮಾತನಾಡುತ್ತಿರಲಿಲ್ಲ ಹಾಗೂ ಗಾಳಿಯ ಶಬ್ಬ ಬರುತ್ತಿತ್ತು. ಆದ್ದರಿಂದ ನನಗೆ ಮತ್ತಷ್ಟು ಗಾಬರಿಯಾಗಿ, ನನ್ನ ತಮ್ಮ ಹಾಗೂ ನನ್ನ ತಂದೆಗೆ ವಿಷಯವನ್ನು ತಿಳಿಸಿದೆ. ಆ ಕೂಡಲೇ ಅವರಿಬ್ಬರೂ ಮನೆಗೆ ಬಂದು, ನನ್ನ ಗಂಡನ ಸ್ನೇಹಿತರುಗಳಿಗೆ ಕರೆ ಮಾಡಿ ವಿಚಾರಿಸಿದಾಗ, ಯಾರಿಂದಲೂ ಏನು ಮಾಹಿತಿ ಬಂದಿರುವುದಿಲ್ಲ. ಆಗ ನಾನು ನನ್ನ ಗಂಡನ ಅಣ್ಣನಾದ ಚಾಸಾ-19 ರವರಿಗೆ ಕರೆ ಮಾಡಿ, ನನ್ನ ಗಂಡ ಮನೆಗೆ ಬಂದಿಲ್ಲ ಹಾಗೂ ಕರೆಗಳನ್ನು ಸ್ವೀಕರಿಸುತ್ತಿಲ್ಲ ಎಂದು ತಿಳಿಸಿರುತ್ತೇನೆ.

4. ಆ ನಂತರ ನನ್ನ ತಮ್ಮ, ನನ್ನ ತಂದೆ ಹಾಗೂ ನನ್ನ ಭಾವ, ಈ 3 ಜನರು ಸೇರಿ ನನ್ನ ಗಂಡನನ್ನು ಎಲ್ಲಾ ಕಡೆ ಹುಡುಕಾಡಿ, ಆತ ಪತ್ತೆಯಾಗದ ಕಾರಣ, ಆ ದಿನ ಸಂಜೆ 07-30 ರ

ಸುಮಾರಿಗೆ ಮೂರೂ ಜನರು ಸೇರಿ ಕಾರವಾರ ನಗರ ಪೋಲಿಸ್ ಠಾಣೆಗೆ ಹೋಗಿ, ನನ್ನ ಗಂಡ ಕಾಣೆಸುತ್ತಿಲ್ಲದ್ದರ ಬಗ್ಗೆ ಪೋಲಿಸರಿಗೆ ಮಾಹಿತಿಯನ್ನು ನೀಡಿದ್ದು, ಆಗ ಪೋಲಿಸರು ನನ್ನ ಗಂಡ ಸ್ನೇಹಿತರು, ಸಂಬಂಧಿಗಳು ಹಾಗೂ ಎಲ್ಲಾ ಕಡೆ ವಿಚಾರಿಸಿ, ಆತ ಪತ್ತೆಯಾಗದಿದ್ದಲ್ಲಿ, ನಾಳೆ ಬೆಳಿಗ್ಗೆ ಬಂದು ದೂರನ್ನು ನೀಡಿ ಎಂದು ತಿಳಿಸಿರುತ್ತಾರೆ. ಆ ನಂತರ ವಾಪಸು ಬಂದು ನಾವೇಲ್ಲರೂ ನನ್ನ ಗಂಡನ ಸ್ನೇಹಿತರು, ಸಂಬಂಧಿಕರು ಹಾಗೂ ಎಲ್ಲಾ ಕಡೆ ಹುಡುಕಾಡಿದ್ದು, ಅವರು ಎಲ್ಲಿಯೂ ಪತ್ತೆಯಾಗಿರುವುದಿಲ್ಲ. ಅದೇ ರೀತಿ ನಾವು ನನ್ನ ಗಂಡನ ಮೊಬೈಲ್ ಗೆ ಮತ್ತು 2 ನೇ ಆರೋಪಿತನ ಮೊಬೈಲ್ ಗೆ ಹಲವು ಬಾರಿ ಕರೆ ಮಾಡಿದ್ದು, ಎರಡೂ ಮೊಬೈಲ್ ಗಳು ರಿಂಗ್ ಆಗುತ್ತಿದ್ದು, ಕರೆಗಳನ್ನು ಸ್ವೀಕರಿಸಿರುವುದಿಲ್ಲ.

5. ಮರು ದಿನ ಬೆಳಿಗ್ಗೆ ಅಂದರೆ ದಿಃ 17-10-2018 ರ ವರೆಗೆ ನನ್ನ ಗಂಡ ಪತ್ತೆಯಾಗದ ಕಾರಣ, ನನ್ನ ತಮ್ಮ, ನನ್ನ ತಂದೆ ಹಾಗೂ ನನ್ನ ಭಾವ ಮೂರೂ ಜನರು ಸೇರಿ ಪುನಃ ಕಾರವಾರ ನಗರ ಪೋಲಿಸ್ ಠಾಣೆಗೆ ಹೋಗಿ, ನಿನ್ನೆಯ ದಿನ 2 ನೇ ಆರೋಪಿ ಪ್ರೇಮಕುಮಾರನಿಗೆ ಕರೆ ಮಾಡಿ ಕರೆದುಕೊಂಡು ಹೋಗಿದ್ದು, ಈಗ ಇಬ್ಬರೂ ಸಹ ಕರೆಗಳನ್ನು ಸ್ವೀಕರಿಸುತ್ತಿಲ್ಲ ಹಾಗೂ ಪ್ರೇಮಕುಮಾರನ ಬಗ್ಗೆ ಯಾವುದೇ ಮಾಹಿತಿ ಸಿಕ್ಕಿರುವುದಿಲ್ಲ ಎಂದು ದೂರನ್ನು ನೀಡಿರುತ್ತಾರೆ. ಆ ಸಮಯದಲ್ಲಿ ನನ್ನ ಮಗಳು 6 ವರ್ಷದವಳು ಇದ್ದ ಕಾರಣ, ನಾನು ಮನೆಯಲ್ಲಿಯೇ ಇದ್ದೆ ಹಾಗೂ ನಾನು ಗಾಬರಿಯಾಗಬಹುದೆಂದು ನನ್ನ ಹುಡುಕಾಟದ ಬಗ್ಗೆ ನನಗೆ ಯಾವುದೇ ಮಾಹಿತಿಯನ್ನು ನನ್ನ ಮನೆಯವರು ನೀಡಿರುವುದಿಲ್ಲ. ದಿಃ 21-10-2018 ರಂದು ನಾನು, ನನ್ನ ತಂದೆಯ ಬಳಿ ನನ್ನ ಗಂಡನ ವ್ಯವಹಾರಕ್ಕೆ ಸಂಬಂಧಿಸಿದಂತೆ 1 ನೇ ಆರೋಪಿ ನನ್ನ ಗಂಡನೊಂದಿಗೆ ದ್ವೇಷದಿಂದ ಇದ್ದನು ಹಾಗೂ ಆತನ ಮಾತಿನಂತೆ 2 ನೇ ಆರೋಪಿ ನನ್ನ ಗಂಡನನ್ನು ಕರೆದುಕೊಂಡು ಹೋಗಿರಬಹುದು ಹಾಗೂ ಅವರಿಬ್ಬರೂ ಸೇರಿ ನನ್ನ ಗಂಡನನ್ನು ಎಲ್ಲಿಯೋ ಮುಚ್ಚಿಟ್ಟಿರಬಹುದು ಎಂದು ಸಂಶಯ ವ್ಯಕ್ತಪಡಿಸಿದ್ದು, ಅದರಂತೆ ಆ ದಿನ ನನ್ನ ತಂದೆ ಪುನಃ ಪೋಲಿಸ್ ಠಾಣೆಗೆ ಹೋಗಿ, 1 ಮತ್ತು 2 ನೇ ಆರೋಪಿಗಳು ಪ್ರೇಮಕುಮಾರನನ್ನು ಬಚ್ಚಿಟ್ಟಿರಬಹುದು ಎಂದು ಸಂಶಯ ವ್ಯಕ್ತಪಡಿಸಿ ಸದರಿಯವರ ವಿರುದ್ಧ ದೂರನ್ನು ನೀಡಿರುತ್ತಾರೆ.

6. ದಿಃ 23-10-2018 ರಂದು ನನ್ನ ತಂದೆ ನನ್ನ ಹತ್ತಿರ ಬಂದು, " ಈ ದಿನ ಪೋಲಿಸರು ನಮ್ಮ ಮನೆಯ ಹತ್ತಿರ ಬಂದು, 1 ನೇ ಆರೋಪಿಯ ಮಾತಿನಂತೆ 2 ಮತ್ತು 3 ನೇ ಆರೋಪಿಗಳು ಪ್ರೇಮಕುಮಾರನನ್ನು ಕೊಲೆ ಮಾಡಿದ್ದಾರೆಂದು ಪೋಲಿಸರು ತಿಳಿಸಿರುತ್ತಾರೆ

ಎಂದು ಹೇಳಿ ಹೋದರು" ಎಂದು ನನ್ನ ಬಳಿ ಹೇಳಿದರು ಹಾಗೂ ತಾನು ಪೋಲಿಸ್ ಠಾಣೆಗೆ ಹೋಗಿ ಬರುವುದಾಗಿ ತಿಳಿಸಿ, ನನ್ನ ತಂದೆ, ನನ್ನ ತಮ್ಮ ಹಾಗೂ ನನ್ನ ಭಾವ ಮತ್ತು ನಮ್ಮ ಸಂಬಂಧಿಕರು ಪೋಲಿಸ್ ಠಾಣೆಗೆ ಹೋಗಿ, ಸ್ವಲ್ಪ ಸಮಯದ ನಂತರ ಮನೆಗೆ ಬಂದು, "ಈ ದಿನ ಪೋಲಿಸರು 2 ಮತ್ತು 3 ನೇ ಆರೋಪಿಗಳನ್ನು ಠಾಣೆಗೆ ಕರೆದುಕೊಂಡು ಬಂದಿದ್ದು, ಅಲ್ಲಿ ಸದರಿ ಆರೋಪಿಗಳಿಬ್ಬರೂ ಪೋಲಿಸರ ಮುಂದೆ 1 ನೇ ಆರೋಪಿಯು ಪ್ರೇಮಕುಮಾರನನ್ನು ಕೊಲೆ ಮಾಡಲು, ಹೇಳಿದ ಮೇರೆಗೆ ನಾವು ಮೂರೂ ಜನ ಸೇರಿ ಒಂದು ದಿನ ಮೊದಲೆ ಯೋಜನೆ ರೂಪಿಸಿ, ನಂತರ ಪ್ರೇಮಕುಮಾರನನ್ನು ಆಕಳಗವಿ ಅರಣ್ಯ ಪ್ರದೇಶಕ್ಕೆ ಕರೆದುಕೊಂಡು ಹೋಗಿ, ಆತನ ಕಣ್ಣಿಗೆ ಬಟ್ಟೆ ಕಟ್ಟಿ , 2 ಮತ್ತು 3 ನೇ ಆರೋಪಿಗಳು ಕತ್ತಿಯಿಂದ ಇರಿದು, ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿರುತ್ತಾರೆ " ಎಂದು ನನ್ನ ತಂದೆ ನನ್ನ ಬಳಿ ಹೇಳಿದರು ಹಾಗೂ ಠಾಣೆಗೆ ಹೋಗಿದ್ದ ನನ್ನ ಭಾವ, ನನ್ನ ತಮ್ಮ ಹಾಗೂ ನನ್ನ ಗಂಡನ ಗೆಳೆಯರು ಪೋಲಿಸರೊಂದಿಗೆ ಕೊಲೆಯಾದ ಸ್ಥಳಕ್ಕೆ ಹೋಗಿರುತ್ತಾರೆ. ಅದೇ ದಿನ ಸಂಜೆ ನನ್ನ ಗಂಡನ ಶವವನ್ನು ನನ್ನ ಅತ್ತೆಯ ಮನೆಯ ಬಳಿ ತೆಗೆದುಕೊಂಡು ಬಂದರು. ನಾನು ನನ್ನ ಗಂಡನ ಶವವನ್ನು ನೋಡಿ ಗುರುತಿಸಿರುತ್ತೇನೆ ಹಾಗೂ ನಾನು ನನ್ನ ಗಂಡನ ಶವವನ್ನು ನೋಡಿದಾಗ, ಆತನ ತಲೆಯ ಹಿಂಬದಿ ಹಾಗೂ ಕುತ್ತಿಗೆಯ ಬಳಿ, ಮೈಮೇಲೆ ಕತ್ತಿಯಿಂದ ಹೊಡೆದ ಗಾಯಗಳಾಗಿದ್ದವು. ಆ ನಂತರ ನನ್ನ ತಮ್ಮನಿಂದ "ಆರೋಪಿಗಳು ನನ್ನ ಗಂಡನನ್ನು ಕೊಲೆ ಮಾಡಿದ ನಂತರ, ನನ್ನ ಗಂಡನ ಕತ್ತಿನಲ್ಲಿದ್ದ ಚೈನ್ ನ್ನು 3 ನೇ ಆರೋಪಿ ತೆಗೆದುಕೊಂಡು ಹೋಗಿರುತ್ತಾನೆ ಹಾಗೂ ಕೊಲೆ ಮಾಡಲು ಬಳಿಸಿದ ಕತ್ತಿಗಳನ್ನು ಕಾಳಿ ನದಿಯಲ್ಲಿ ಬಿಸಾಕಿರುತ್ತಾರೆ" ಎಂಬ ವಿಷಯ ತಿಳಿದು ಬಂತು. ಈ ವಿಷಯದ ಬಗ್ಗೆ ನಾನು ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

7. 4 ಮತ್ತು 5 ನೇ ಆರೋಪಿಗಳಿಗೆ ನನ್ನ ಗಂಡನನ್ನು ಕೊಲೆ ಮಾಡಲು ಸಂಚು ರೂಪಿಸಿದ ಮಾಹಿತಿ ಹಾಗೂ ನನ್ನ ಗಂಡನನ್ನು ಕೊಲೆ ಮಾಡಿದ ಸಂಪೂರ್ಣ ಮಾಹಿತಿ ಇದ್ದರೂ ಸಹ ಅವರು ಈ ವಿಷಯವನ್ನು ಗೌಪ್ಯವಾಗಿ ಇಟ್ಟಿರುತ್ತಾರೆ ಹಾಗೂ ನನ್ನ ಗಂಡನ ಕೊಲೆಯಾದ ನಂತರ 4 ನೇ ಆರೋಪಿ, 1 ನೇ ಆರೋಪಿಯನ್ನು ತಲೆ ಮರೆಸಿಕೊಂಡು ಹೋಗಲು ಅನುಕೂಲವಾಗುಂತೆ ತನ್ನ ಕಾರಿನಲ್ಲಿ ಕರೆದುಕೊಂಡು ಹೋಗಿ, ಗೋವಾಗೆ ಬಿಟ್ಟು ಬಂದಿರುತ್ತಾನೆ. ಈ ವಿಷಯದ ಬಗ್ಗೆಯೂ ಸಹ ನಾನು ಪೋಲಿಸರ ಮುಂದೆ ಮರು ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ತನ್ನ ಗಂಡನ ಬೈಕ್ ನ್ನು ನಿಪಿ–3 ಪೋಟೊದಲ್ಲಿ ನೋಡಿ ಗುರುತಿಸಿರುತ್ತಾರೆ. ಅದೇ ರೀತಿ

ಸಾಕ್ಷಿಯು ತನ್ನ ಗಂಡನ ಚೈನ್ ನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು-4 ಎಂದು ಗುರುತಿಸಲಾಗಿರುತ್ತದೆ. ನಿಪಿ-17 ಫೋಟೋದಲ್ಲಿ ಸಾಕ್ಷಿಯು ತನ್ನ ಗಂಡನ ಶವವನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ತನ್ನ ಗಂಡನ ಕೊಲೆಯಾದ ದಿನ ಧರಿಸಿದ್ದ ನಿಕ್ಕರ್ ನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮುದ್ದೆ ಮಾಲು-10 ಎಂದು ಗುರುತಿಸಲಾಗಿರುತ್ತದೆ. ಈಗ ನ್ಯಾಯಾಲಯದ ಮುಂದೆ ಇರುವ 1, 2, 4 ಮತ್ತು 5 ನೇ ಆರೋಪಿಗಳನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ./ಆರ್.ಕೆ.ಎಂ. ವಕೀಲರಿಂದ.**

8. ನನಗೆ ಬಂದ ಮಾಹಿತಿಯ ಪ್ರಕಾರ ನನ್ನ ಗಂಡ ಕೊಲೆಗೆ ಯಾರು ಪ್ರತ್ಯಕ್ಷದರ್ಶಿಗಳು ಇರುವುದಿಲ್ಲ ಎಂದರೆ ಸರಿ. ನನ್ನ ಹಾಗೂ ಪ್ರೇಮಕುಮಾರನ ಮದುವೆ ದಿಃ 05-06-2010 ರಂದು ಆಗಿರುತ್ತದೆ. ನಾನು ಮದುವೆಯಾಗಿ ಬಂದ 1 ವರ್ಷದ ನಂತರ 1 ನೇ ಆರೋಪಿ ನನ್ನ ಗಂಡನೊಂದಿಗೆ ನಮ್ಮ ಮನೆಗೆ ಬಂದಿರುತ್ತಾನೆ, ಆತ ನಮ್ಮ ವಿವಾಹಕ್ಕೆ ಬಂದಿರುವುದಿಲ್ಲ. 2017 ಇಸ್ವಿಯ ವರೆಗೆ ನನ್ನ ಗಂಡ ಹಾಗೂ 1 ನೇ ಆರೋಪಿಯ ನಡುವೆ ಒಳ್ಳೆಯ ಬಾಂಧವ್ಯ ಇರುತ್ತದೆ. ನನ್ನ ಮಗಳ ಹುಟ್ಟು ಹಬ್ಬದ ಆಚರಣೆಯಲ್ಲಿ 1 ನೇ ಆರೋಪಿ ಬಂದಿರುತ್ತಾನೆ. ನಮ್ಮ ಮನೆಯ ಶುಭ ಸಂದರ್ಭಗಳಲ್ಲಿ 1 ನೇ ಆರೋಪಿ ಭಾಗವಹಿಸಿದ ಬಗ್ಗೆ ಯಾವುದೇ ಫೋಟೋವನ್ನು ಪೋಲಿಸರಿಗೆ ನೀಡಿರುವುದಿಲ್ಲ ಆದರೆ ಫೋಟೊಗಳು ಮನೆಯಲ್ಲಿರುತ್ತವೆ. 1 ನೇ ಆರೋಪಿ ನಮ್ಮ ಮನೆಗೆ ಬಂದು ಹೋಗುತ್ತಿದ್ದ ಹಾಗೂ ನನ್ನ ಗಂಡನೊಂದಿಗೆ ಒಳ್ಳೆಯ ಬಾಂಧವ್ಯ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ನನ್ನ ಮದುವೆಯಾಗುವ ಕಾಲಕ್ಕೆ ನನ್ನ ಗಂಡ ಸಣ್ಣ-ಪುಟ್ಟ ವ್ಯವಹಾರಗಳನ್ನು ಮಾಡುತ್ತಿದ್ದ. 2017 ನೇ ಇಸವಿಯಲ್ಲಿ ನನ್ನ ಗಂಡ ಹಾಗೂ 1 ನೇ ಆರೋಪಿ ಕಾರವಾರ ಶಿಪ್ಪಿಂಗ್ ಏಜೆನ್ಸಿಯನ್ನು ಪಾಲುದಾರಿಕೆಯಲ್ಲಿ ಪ್ರಾರಂಭಿಸಿರುತ್ತಾರೆ. ಆದರೆ ಈ ಬಗ್ಗೆ ಪಾಲುದಾರಿಕೆಯ ಪತ್ರ ಇರುವುದಿಲ್ಲ. ಅದಕ್ಕೂ ಮೊದಲು ಇಬ್ಬರೂ ಸೇರಿಯೇ ವ್ಯವಹಾರಗಳನ್ನು ಮಾಡುತ್ತಿದ್ದರು. ಪಾಲುದಾರಿಕೆಗೆ ಬಂಡವಾಳ ತೊಡಗಿಸಿದ ಬಗ್ಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿಯು ಮಾಹಿತಿ ಇದೆ ಎಂದು ನುಡಿಯುತ್ತಾರೆ. ನನ್ನ ಗಂಡ ಎಷ್ಟು ಬಂಡವಾಳ ಹಾಕಿದ್ದರು ಎಂದು ನನಗೆ ಮಾಹಿತಿ ಇಲ್ಲ. ಬಂಡವಾಳ ತೊಡಗಿಸಿದ ಬಗ್ಗೆ ನಾನು ಯಾವುದೇ ದಾಖಲೆಯನ್ನು ನೋಡಿರುವುದಿಲ್ಲ. ಕಾರವಾರ ಶಿಪ್ಪಿಂಗ್ ಏಜೆನ್ಸಿಯನ್ನು ನನ್ನ ಗಂಡ ಹಾಗೂ 1 ನೇ ಆರೋಪಿ ಜೊತೆಯಾಗಿ

ಪ್ರಾರಂಭಿಸಿದ ಬಗ್ಗೆ ನಮ್ಮ ಬಳಿ ಯಾವುದೇ ದಾಖಲೆ ಇಲ್ಲ ಹಾಗೂ ಯಾವುದೇ ದಾಖಲೆಯನ್ನು ನಾವು ಪೋಲೀಸರಿಗೆ ನೀಡಿರುವುದಿಲ್ಲ. 1 ನೇ ಆರೋಪಿ ಪಾಲುದಾರಿಕೆಯ ಸಂಸ್ಥೆಯ ಮೂಲಕ ನಿನ್ನ ಗಂಡನಿಗೆ ಏನಾದರೂ ಮೋಸ ಮಾಡಿರುತ್ತಾನಾ ಎಂದು ಪ್ರಶ್ನೆ ಕೇಳಲಾಗಿ, ಸಾಕ್ಷಿಯು ನನ್ನ ಗಂಡನಿಗೆ ಬರಬೇಕಾದ ವ್ಯವಹಾರಗಳನ್ನು ತನ್ನೆಡೆಗೆ ಬರುವಂತೆ ಮಾಡಿಕೊಳ್ಳುತ್ತಿದ್ದ ಎಂದು ನುಡಿಯುತ್ತಾರೆ. ನನ್ನ ಗಂಡ 1 ನೇ ಆರೋಪಿಯ ವಿರುದ್ಧ ಯಾವುದೇ ದೂರನ್ನು ನೀಡಿರುವುದಿಲ್ಲ.

10. ಪೊಯಿನೂರು ಶಿಪ್ಪಿಂಗ್ ಕಂಪನಿಯು ಮಂಗಳೂರಿನ ಶರೀಫ್ ರವರಿಗೆ ಸೇರಿದ್ದು, ಅದರಲ್ಲಿ ನನ್ನ ಗಂಡ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದರು. ನಾನು ಗೃಹಿಣಿ ಎಂದರೆ ಸರಿ. ನನ್ನ ಗಂಡ ಕೆಲಸ ಮಾಡುತ್ತಿದ್ದ ಸಂಸ್ಥೆಯ ಚೆನ್ನಾಗಿ ಅಭಿವೃದ್ಧಿ ಆಗಿತ್ತು ಎಂದು ನನ್ನ ಗಂಡನು ನನಗೆ ಹೇಳಿದ್ದನು. ಪೊಯಿನೂರು ಶಿಪ್ಪಿಂಗ್ ಕಂಪನಿಯು ಚೆನ್ನಾಗಿ ಅಭಿವೃದ್ಧಿ ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಗೆ ನನ್ನ ಗಂಡನ ಮೇಲೆ ದ್ವೇಷ ಮಾಡಲು ಯಾವುದೇ ಕಾರಣಗಳು ಇರಲಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ನನ್ನ ಗಂಡನಿಗೆ ಕರೆ ಮಾಡಿ ಕರೆದುಕೊಂಡು ಹೋದ ದಿನ ಮಂಗಳವಾರ ಆಗಿತ್ತು. ನನ್ನ ಗಂಡನ ಕೆಲಸದ ಅವಧಿ ಬೆಳಿಗ್ಗೆ 10-00 ಗಂಟೆಯಿಂದ ಮದ್ಯಾಹ್ನ 01-00 ಗಂಟೆ ಹಾಗೂ ಸಂಜೆ ಸುಮಾರು 04-00 ಗಂಟೆಗೆ ಹೋಗಿ 06-00 ಗಂಟೆ ಬರುತ್ತಿದ್ದರು ಹಾಗೂ ಮದ್ಯಾಹ್ನದ ವೇಳೆಗೆ ಯಾವುದಾದರೂ ಕೆಲಸ ಬಂದಲ್ಲಿ ಮಾತ್ರ ಹೋಗುತ್ತಿದ್ದರು. ನನ್ನ ಗಂಡ ಒಂದು ಸಂಸ್ಥೆಯ ಉದ್ಯೋಗಿಯಾಗಿರುವಾಗ ಕಟ್ಟಿಗೆಯ ವ್ಯಾಪಾರ ಮಾಡಲು ಬರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

11. 2 ನೇ ಆರೋಪಿ ನನ್ನ ಗಂಡನಿಗೆ ಕರೆ ಮಾಡಿ ಕಟ್ಟಿಗೆ ವ್ಯಾಪಾರ ಇದೆ, ಬಾ ಎಂದು ಕರೆದುಕೊಂಡು ಹೋಗಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ 2 ನೇ ಆರೋಪಿಯ ಮೂಲಕ ಮಾಹಿತಿಯನ್ನು ಪಡೆಯುತ್ತಿದ್ದ ಎಂಬ ವಿಚಾರವನ್ನು ನನ್ನ ಗಂಡ ನನಗೆ ತಿಳಿಸಿರುತ್ತಾನೆ. 1 ನೇ ಆರೋಪಿಗೆ ನನ್ನ ಗಂಡನ ವ್ಯವಹಾರದ ಬಗ್ಗೆ ಯಾವುದೇ ಆಸಕ್ತಿ ಇರಲಿಲ್ಲ ಹಾಗೂ ಯಾವುದೇ ಮಾಹಿತಿಯನ್ನು ಯಾರ ಮೂಲಕವು ಪಡೆದುಕೊಳ್ಳುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಮೊದಲ ಬಾರಿಗೆ ದಿಃ 23-10-2018 ರಂದು ಪೋಲಿಸರಿಗೆ ಮುಖಾ-ಮುಖಿಯಾಗಿರುತ್ತೇನೆ. ನನ್ನ ತಂದೆಯ ಮನೆ ಕಾರವಾರದ ಶಿರವಾಡದಲ್ಲಿರುತ್ತದೆ

ಹಾಗೂ ನಮ್ಮ ಮನೆಯಿಂದ 5-6 ಕಿ.ಮೀ ದೂರು ಇರುತ್ತದೆ. ನನ್ನ ತಂದೆ ಮೊದಲನೆ ದಿನ ಠಾಣೆಗೆ ಹೋದಾಗ ಯಾವುದೇ ಲಿಖಿತ ದೂರಿನೊಂದಿಗೆ ಹೋಗಿರುವುದಿಲ್ಲ. ನನ್ನ ತಂದೆ ದಿಃ 16-10-2018 ರಂದು ಪೋಲಿಸ್ ಠಾಣೆಗೆ ಹೋಗಿಲ್ಲ ಎಂದರೆ ಸರಿಯಲ್ಲ.

12. ನಾನು ನನ್ನ ತಂದೆಯ ಬಳಿ 1 ನೇ ಆರೋಪಿಯ ಬಗ್ಗೆ ಪ್ರಥಮ ಬಾರಿಗೆ ದಿಃ 20-10-2018 ರಂದು ಹೇಳಿರುತ್ತೇನೆ. ದಿಃ 17-10-2018 ರಂದು ನನ್ನ ತಂದೆ ನೀಡಿದ ದೂರನ್ನು ನಾನು ನೋಡಿರುತ್ತೇನೆ ಆದರೆ ನನಗೆ ಆಘಾತವಾಗಿದ್ದರಿಂದ ಸರಿಯಾಗಿ ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಆ ದಿನ ನೀಡಿದ ದೂರಿನಲ್ಲಿ ಯಾರ ಮೇಲೆ ದೂರು ನೀಡಿರುತ್ತಾರೆ ಎಂದು ನನಗೆ ನೆನಪಿಲ್ಲ. ಈ ಘಟನೆ ನಡೆಯುವ ಕಾಲಕ್ಕೆ ಯು.ಕೆ.ಜಿ ಅಥವಾ 1 ನೇ ತರಗತಿಯಲ್ಲಿ ಓದುತ್ತಿದ್ದಿರಬಹುದು ಆಕೆ ಸೆಂಟ್ ಮೈಕೆಲ್ ಶಾಲೆಯಲ್ಲಿ ಓದುತ್ತಿದ್ದಾಳೆ. ನಮ್ಮ ಮನೆಯಿಂದ ಪೋಲಿಸ್ ಠಾಣೆ 3 ಕಿ.ಮೀ ದೂರದಲ್ಲಿರುತ್ತದೆ. ಆ ಸಮಯದಲ್ಲಿ ನನ್ನ ಬಳಿ ಮೊಬೈಲ್ ಫೋನ್ ಇರುತ್ತದೆ. ನನ್ನ ತಂದೆಯವರನ್ನು ಠಾಣೆಗೆ ಕಳುಹಿಸುವ ಬದಲು ನಾನೇ ಠಾಣೆಗೆ ಹೋಗಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನಾನು ಹೋಗಲು ಸಿದ್ದಳಿದ್ದೆ, ಆದರೆ ನನ್ನ ಮಗ ಚಿಕ್ಕವಳಿದ್ದ ಕಾರಣ, ನಮ್ಮ ಮನೆಯವರು ಕಳುಹಿಸಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯವರು ಪೋಲಿಸ್ ಠಾಣೆಯಲ್ಲಿ ನೀಡಿದ ದೂರುಗಳನ್ನು ನಾನು ಹೇಳಿದ ಮೇರೆಗೆ ಬರೆದಿರುತ್ತಾರೆ. ಪೋಲಿಸರು ನನ್ನ ಮೂಲಕ ಸಂಪರ್ಕಿಸಿರುವುದಿಲ್ಲ. ನನ್ನ 2 ನೇ ವರ್ಷದ ಪದವಿ ಅಪೂರ್ಣಗೊಂಡಿದ್ದು, ನಾನು ನರ್ಸಿಂಗ್ ವಿದ್ಯಾಭ್ಯಾಸ ಮಾಡಿರುತ್ತೇನೆ.

13. 1 ನೇ ಆರೋಪಿಯ ವಿರುದ್ದ ದೂರು ಕೊಡುವಂತೆ ನಾನು ನನ್ನ ಗಂಡನಿಗೆ ಸಲಹೆ ನೀಡಿರುವುದಿಲ್ಲ. 2 ನೇ ಆರೋಪಿ 1 ನೇ ಆರೋಪಿ ಬಳಿ ಕೆಲಸ ಮಾಡಿರುವುದನ್ನು ನಾನು ನೋಡಿರುತ್ತೇನೆ ಹಾಗೂ ಇತರೆ ಜನರಿಂದ ಕೇಳಿ ತಿಳಿದುಕೊಂಡಿರುತ್ತೇನೆ. 1 ನೇ ಆರೋಪಿಗೂ, 2 ನೇ ಆರೋಪಿ ಹಾಗೂ 5 ನೇ ಆರೋಪಿಗಳ ನಡುವೆ ಯಾವುದೇ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ಎಂದಿಗೂ 1 ನೇ ಆರೋಪಿಯಡಿಯಲ್ಲಿ ಉದ್ಯೋಗಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲ-10 ನಿಕ್ಕರ್ ನನ್ನ ಗಂಡನದಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲು-4 ಚಿನ್ನದ ಚೈನ್ ನನ್ನ ಗಂಡನದ್ದು ಎಂದು ಹೇಳಲು ರಶೀದಿಯ ಪ್ರತಿ ನನ್ನ ಬಳಿ ಇರುತ್ತದೆ ಹಾಗೂ ಪೋಲಿಸರಿಗೂ ಸಹ ನೀಡಿರುತ್ತೇನೆ. ಸದರಿ ಚೈನ್ ನ್ನು ನನ್ನ

ಮದುವೆಯಾದ ನಂತರ ಶ್ರೇಷ್ಟ ಜ್ಯುವೇಲರ್ಸನಲ್ಲಿ ಖರೀದಿ ಮಾಡಿರುತ್ತೇನೆ. ನನ್ನ ತಂದೆ ನೀಡಿದ ದೂರುಗಳಲ್ಲಿ ಸದರಿ ಚೈನ್ ಬಗ್ಗೆ ನಮೂದಿಸಿದ್ದಿರಾ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

14. ದಿಃ 23-10-2018 ರಂದು ನನ್ನ ಗಂಡನ ಶವ ತಂದ ಸಮಯ ನನಗೆ ನೆನಪಿಲ್ಲ, ಆದರೆ ಆಗ ಕತ್ತಲೆಯಾಗಿತ್ತು. ನನ್ನ ಗಂಡ ಕಾಣೆಯಾದ ನಂತರ ಅವರನ್ನು ನೋಡಿದ್ದು, ಶವದ ರೂಪದಲ್ಲಿ. ಮರಣೋತ್ತರ ಪರೀಕ್ಷೆ ಕಾಲಕ್ಕೆ ಶವವನ್ನು ಕೊಯ್ಯಲಾಗುತ್ತದೆ ಎಂದರೆ ಸರಿ. ಶವವನ್ನು ತಂದಾಗ ಮರಣೋತ್ತರ ಪರೀಕ್ಷೆ ಮಾಡಲಾಗಿರುತ್ತದೆ ಹಾಗೂ ಅದನ್ನು ಬಿಳಿ ಬಟ್ಟೆಯಲ್ಲಿ ಸುತ್ತಲಾಗಿರುತ್ತದೆ. ಶವವನ್ನು ಬಟ್ಟೆಯಲ್ಲಿ ಸುತ್ತಲಾಗಿದ್ದರಿಂದ ಶವದ ಮೇಲಿನ ಗಾಯಗಳನ್ನು ನೋಡಲು ಅವಕಾಶ ಇಲ್ಲ ಎಂದರೆ ಸಾಕ್ಷಿಯು ಬಟ್ಟೆಯನ್ನು ಬಿಚ್ಚಿ ನೋಡಿರುತ್ತೇವೆ ಎಂದು ನುಡಿಯುತ್ತಾರೆ. ಬಟ್ಟೆಯನ್ನು ತೆರೆದು ನೋಡಿದಾಗ ಮರಣೋತ್ತರ ಪರೀಕ್ಷೆ ಕಾಲಕ್ಕೆ ಕೊಯ್ಯದ ಗಾಯಗಳು ಇತ್ತು ಎಂದರೆ ಸರಿ. ನನ್ನ ಗಂಡ ಹುಟ್ಟಿದಾಗಿನಿಂದಲೂ ಕಾರವಾರದಲ್ಲಿಯೇ ವಾಸವಾಗಿರುತ್ತಾರೆ ಎಂದರೆ ಸರಿ. ನನ್ನ ಗಂಡನಿಗೆ ಕಾರವಾರದಲ್ಲಿ ಬಹಳಷ್ಟು ವೈರಿಗಳು ಇದ್ದರು ಎಂದರೆ ಸರಿಯಲ್ಲ. ನನ್ನ ಗಂಡನ ಸಾವಿಗೂ, 1 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ಸಾವು ಹೇಗಾಯಿತು ಮತ್ತು ಯಾರಿಂದ ಆಯಿತು ಎಂಬ ಬಗ್ಗೆ ಪೋಲಿಸರು ತಿಳಿಸಿದರು ಎಂದು ನನ್ನ ತಮ್ಮ ಹಾಗೂ ನನ್ನ ತಂದೆ ನನ್ನ ಬಳಿ ಎಂದಿಗೂ ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ 1 ನೇ ಆರೋಪಿಯ ವಿರುದ್ಧ ಹೇಳಿದ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದ.**

15. 2 ಮತ್ತು 3 ನೇ ಆರೋಪಿತರು ನನ್ನ ಗಂಡನನ್ನು ಕೊಲೆ ಮಾಡಿದ್ದಾರೆ ಎಂಬ ಸಂಗತಿಯನ್ನು ನಾನು ಕೇಳಿ ತಿಳಿದುಕೊಂಡಿದ್ದಾಗಿರುತ್ತದೆ. ಪೋಲಿಸರು ಹಾಗೂ ನನ್ನ ತಂದೆಯವರು ಹೇಳಿದ ಹೇಳಿಕೆಯ ಆಧಾರದ ಮೇಲೆ 2 ಮತ್ತು 3 ನೇ ಆರೋಪಿತರು ನನ್ನ ಗಂಡನನ್ನು ಕೊಲೆ ಮಾಡಿದ್ದಾರೆ ಎಂದು ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು 2 ನೇ ಆರೋಪಿ ನನ್ನ ಗಂಡನಿಗೆ ಕರೆ ಮಾಡಿ ಕರೆದುಕೊಂಡು ಹೋಗಿದ್ದು, ಆ ನಂತರ 2 ಮತ್ತು 3 ನೇ ಆರೋಪಿತರು ಕೊಲೆ ಮಾಡಿದ್ದಾರೆಂದು ತಿಳಿದು ಬಂದಿದ್ದರಿಂದ, 2 ಮತ್ತು 3 ನೇ ಆರೋಪಿತರೇ ಕೊಲೆ ಮಾಡಿದ್ದಾರೆಂದು ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ. ಈ ದಿನ ಚಾಸಾ-19 ರವರು

ಸಹ ಬಂದಿರುತ್ತಾರೆ ಎಂದರೆ ಸಾಕ್ಷಿಯು ಅವರು ನನ್ನನ್ನು ಕರೆದುಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಇದೇ ಮೊದಲ ಬಾರಿಗೆ ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸರಿ. ಈ ಪ್ರಕರಣದಲ್ಲಿ ನನಗಿಂತಲೂ ಚಾಸಾ–19 ರವರಿಗೆ ಹೆಚ್ಚಿನ ಮಾಹಿತಿ ಇರುತ್ತದೆ ಎಂದರೆ ಸರಿಯಲ್ಲ.

16. 2022 ರಲ್ಲಿ ನಾನು ಬೇರೆ ಮದುವೆಯಾಗಿರುತ್ತೇನೆ. ನಾನು ಈಗ ಮದುವೆಯಾದ ವ್ಯಕ್ತಿಯ ಹೆಸರು ಬಸಪ್ಪ, ಅವರು ಮೂಲತಃ ಬೆಳಗಾಂವದವರಾಗಿದ್ದು, ಕಾರವಾರದ ಬಂದರಿನಲ್ಲಿ ಮೆಕ್ಯಾನಿಕಲ್ ಸುಪರ್ ವೈಸರ್ ಆಗಿ ಕೆಲಸ ಮಾಡುತ್ತಿದ್ದಾರೆ. ಅವರು ನನಗಿಂತ ವಯಸ್ಸಿನಲ್ಲಿ ಚಿಕ್ಕವರು ಎಂದರೆ ಸರಿಯಲ್ಲ. ನನ್ನ ಮನೆಯವರು ಹಾಗೂ ನನ್ನ ಅತ್ತೆ ಮನೆಯವರು ಸೇರಿ ನನ್ನ ಮದುವೆ ಮಾಡಿರುತ್ತಾರೆ. ನನ್ನ ಮದುವೆಗೂ ಮೊದಲು ನಾನು ನನ್ನ 2 ನೇ ಗಂಡನ ವಿರುದ್ಧ ಪೋಲಿಸ್ ಠಾಣೆಯಲ್ಲಿ ದೂರನ್ನು ನೀಡಿ, ಆ ನಂತರ ರಾಜಿ ಪಂಚಾಯತಿ ನಡೆದು, 2 ನೇ ಮದುವೆಯಾಗಿರುತ್ತದೆ ಎಂದರೆ ಸರಿ. ನನ್ನ ಗಂಡ ತೀರಿಕೊಂಡ ನಂತರ ಹಾಗೂ ನನ್ನ 2 ನೇ ಮದುವೆಯಾಗುವ ಪೂರ್ವದಲ್ಲಿ ಪೋರ್ಟ್ ಕಾಲೋನಿಯಲ್ಲಿ ವಾಸವಾಗಿದ್ದೆನು. ನನಗೂ ಹಾಗೂ ನನ್ನ ಗಂಡ ಪ್ರೇಮಕುಮಾರನಿಗೂ ಜಗಳ ಆಗುತ್ತಿತ್ತು ಹಾಗೂ ಸಂಬಂಧ ಸರಿ ಇರಲಿಲ್ಲ ಎಂದರೆ ಸರಿಯಲ್ಲ.

17. 2 ನೇ ಆರೋಪಿ ದಾಂಡೇಲಿಯವನು, ಆದರೆ ಆತ ದಾಂಡೇಲಿಯಲ್ಲಿ ಎಲ್ಲಿ ವಾಸವಾಗಿದ್ದ ಹಾಗೂ ಅಲ್ಲಿ ಏನು ಕೆಲಸ ಮಾಡುತ್ತಿದ್ದ ಎಂದು ನನಗೆ ಗೊತ್ತಿಲ್ಲ. ಕಾರವಾರದಲ್ಲಿರುವ ಎಲ್ಲಾ ಶಿಪ್ಪಿಂಗ್ ಏಜೆನ್ಸಿಗಳಿಗೂ 2 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಕಾರವಾರದ ಶಿಪ್ಪಿಂಗ್ ಕಂಪನಿಯಲ್ಲಿ 2 ನೇ ಆರೋಪಿ ಏನು ಕೆಲಸ ಮಾಡುತ್ತಿದ್ದ ಎಂದರೆ ಸಾಕ್ಷಿಯು ನಾನು ನೋಡಿದಾಗಲೆಲ್ಲಾ, ಕಾರವಾರದ ಶಿಪ್ಪಿಂಗ್ ಏಜೆನ್ಸಿ ಆಫೀಸ್ ಹತ್ತಿರ ಇರುತ್ತಿದ್ದ, ಆದರೆ ಏನು ಮಾಡುತ್ತಿದ್ದ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪೊಯಿನೂರು ಶಿಪ್ಪಿಂಗ್ ಕಂಪನಿಯಲ್ಲಿ ಎಷ್ಟು ಆದಾಯ ಇತ್ತು ಎಂದು ನನಗೆ ಗೊತ್ತಿಲ್ಲ, ಆದರೆ ಶಿಪ್ ಗಳು ಬಂದಾಗ ಕೆಲಸ ಇರುತ್ತಿತ್ತು ಎಂದು ನುಡಿಯುತ್ತಾರೆ. ನನ್ನ ಗಂಡನಿಗೆ ಶಿಪ್ಪಿಂಗ್ ಏಜೆನ್ಸಿಯಿಂದ ಬರುವ ಆದಾಯ ಬಿಟ್ಟು ಬೇರೆ ಯಾವುದೇ ಆದಾಯ ಇರಲಿಲ್ಲ. ಪೊಯಿನೂರು ಶಿಪ್ಪಿಂಗ್ ಏಜೆನ್ಸಿಯಲ್ಲಿ ಯಾವುದೇ ಲಾಭ–ನಷ್ಟವಾದರೆ ಅದು ಅದರ ಮಾಲೀಕರಿಗೆ ಸಂಬಂಧಪಟ್ಟಿತ್ತು ಎಂದರೆ ಸರಿ. ಅಲ್ಲಿ ಒಂದು ವೇಳೆ ನಷ್ಟವಾದರೆ ನನ್ನ ಗಂಡ ಸದರಿ

ನಷ್ಟವನ್ನು ಭರಿಸುಲು ಭಾದ್ಯನಾಗಿರಲಿಲ್ಲ ಎಂದರೆ ಸರಿ. ನನ್ನ ಗಂಡ ತೀರಿಕೊಂಡ ನಂತರ ಪೊಯಿನೂರು ಶಿಪ್ಪಿಂಗ್ ಕಂಪನಿಯ ಮಾಲೀಕರು ಮಂಗಳೂರಿಗೆ ಹೋದರು ಎಂದರೆ ಸಾಕ್ಷಿಯು ಅವರು ಮಂಗಳೂರಿನಲ್ಲಿಯೇ ವಾಸವಾಗಿದ್ದರು ಎಂದು ನುಡಿಯುತ್ತಾರೆ. ಮಂಗಳೂರಿನ ಶರೀಫ್ ರವರನ್ನು ನಾನು 2-3 ಬಾರಿ ಭೇಟಿಯಾಗಿರುತ್ತೇನೆ.

18. 2 ನೇ ಆರೋಪಿ ನನ್ನ ಗಂಡನು ನಡೆಸುತ್ತಿದ್ದ ಶಿಪ್ಪಿಂಗ್ ಕಂಪನಿಗೆ ಯಾವಾಗ ಹಾಗೂ ಎಷ್ಟು ಬಾರಿ ಬರುತ್ತಿದ್ದ ಎಂದು ಪ್ರಶ್ನೆ ಕೇಳಲಾಗಿ ಸಾಕ್ಷಿಯು ಹಲವು ಬಾರಿ ಬಂದಿರುತ್ತಾನೆ ಹಾಗೂ ಕರಾವಳಿ ಉತ್ಸವ ನಡೆದಾಗಲೂ ಸಹ ನನ್ನ ಗಂಡನ ಸ್ಟಾಲ್ ಗೆ ಬಂದು ಸಹಾಯ ಮಾಡಿರುತ್ತಾನೆ ಮತ್ತು ಒಮ್ಮೆ ತನ್ನ ಮಕ್ಕಳ ವಿದ್ಯಾಭ್ಯಾಸಕ್ಕೆ ಹಣ ಕೇಳಿರುತ್ತಾನೆ ಎಂದು ಸಾಕ್ಷಿ ನುಡಿಯುತ್ತಾರೆ. 2 ನೇ ಆರೋಪಿಯು ನನ್ನ ಗಂಡ ಕೆಲಸ ಮಾಡುತ್ತಿದ್ದ ಕಂಪನಿಯಲ್ಲಿ, ಕೆಲಸ ಮಾಡುತ್ತಿಲ್ಲವಾದ್ದರಿಂದ ಆತನಿಗೆ ಅಲ್ಲಿ ನಡೆಯುತ್ತಿದ್ದ ವ್ಯವಹಾರಗಳು ಆತನಿಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಕಂಪನಿಯ ಗೌಪ್ಯ ವಿಷಯಗಳು ಅಲ್ಲಿ ಕೆಲಸ ಮಾಡುವವರಿಗೆ ಮಾತ್ರ ಗೊತ್ತಿದ್ದು, ಹೊರಗಿನವರಿಗೆ ಗೊತ್ತಾಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ನನ್ನ ಮುಂದೆ ಕಂಪನಿಯ ಎಲ್ಲಾ ವ್ಯವಹಾರಗಳನ್ನು ಹೇಳುತ್ತಿದ್ದರು. 2 ನೇ ಆರೋಪಿ ನನ್ನ ಗಂಡ ಕೆಲಸ ಮಾಡುತ್ತಿದ್ದ ಕಂಪನಿಯ ಎಲ್ಲಾ ವಿಷಯಗಳನ್ನು 1 ನೇ ಆರೋಪಿಗೆ ಹೇಳುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

19. ನನ್ನ ಗಂಡ ಕಟ್ಟಿಗೆ ವ್ಯಾಪಾರ ಮಾಡಲು ಯಾವುದೇ ಅನುಮತಿ ಪಡೆದಿರುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಕಟ್ಟಿಗೆ ವ್ಯಾಪಾರ ಮಾಡಲು ಅನುಮತಿ ಪಡೆಯಬೇಕಾಗುತ್ತದೆ ಎಂದರೆ ಸರಿ. ದಿಃ 16-10-2018 ರಂದು ಬೆಳಿಗ್ಗೆ ನನ್ನ ಗಂಡ ಕೆಲಸಕ್ಕೆ ಹೋಗಿ, ಮದ್ಯಾಹ್ನ 01-00 ಗಂಟೆ ಸುಮಾರಿಗೆ ಮನೆಗೆ ಬಂದಿರುತ್ತಾರೆ. ಆ ದಿನ ಕೆಲಸಕ್ಕೆ ಹೋಗಿ, ಊಟಕ್ಕೆ ಮನೆಗೆ ಬರುವ ನಡುವಿನ ಅವಧಿಯಲ್ಲಿ 2 ನೇ ಆರೋಪಿ ಒಮ್ಮೆ ಕರೆ ಮಾಡಿದ್ದಾನೆಂದು ನನ್ನ ಗಂಡ ನನಗೆ ಬಳಿ ಹೇಳಿರುತ್ತಾನೆ, ಆದರೆ ಆ ಕರೆಯನ್ನು ನನ್ನ ಗಂಡ ಸ್ವೀಕರಿಸಿರುವುದಿಲ್ಲ ಮತ್ತು ಅದು ಮಿಸ್ಡ್ ಕಾಲ್ ಆಗಿರುತ್ತದೆ. 2 ನೇ ಆರೋಪಿ ನನ್ನ ಗಂಡ ಕರೆ ಮಾಡಿದ ನಿರ್ದಿಷ್ಟ ಸಮಯ ನನಗೆ ಹೇಳಲು ಬರುವುದಿಲ್ಲ, ಸಾಕ್ಷಿಯು ಮದ್ಯಾಹ್ನ ಸುಮಾರು 01-30 ಗಂಟೆ ಇರಬಹುದು ಎಂದು ನುಡಿಯುತ್ತಾರೆ. 2 ನೇ ಆರೋಪಿ ಕರೆ ಮಾಡಿದ ಕಾಲಾವಧಿ (duration) ಎಷ್ಟು ಎಂದು ನನಗೆ ನೆನಪಿಲ್ಲ. ನನ್ನ ಗಂಡ ಮನೆ ಬಟ್ಟಾಗ ಸುಮಾರು ಮದ್ಯಾಹ್ನ 02-00 ಗಂಟೆ

ಆಗಿರಬಹುದು ಎಂದು ನುಡಿಯುತ್ತಾರೆ. ನನ್ನ ಗಂಡ ಮನೆ ಬಿಟ್ಟಾಗ ಆತನ ಮೈ ಮೇಲೆ ಟೀ ಶರ್ಟ್, ಪ್ಯಾಂಟ್, ಶೂಗಳು, ವಾಚ್, ಕತ್ತಿನಲ್ಲಿ ಚೈನ್ ಇತ್ತು. ಇವುಗಳನ್ನು ಬಿಟ್ಟು ಬೇರೆ ಯಾವುದೇ ಬಂಗಾರದ ಆಭರಣಗಳು ಇರುವುದಿಲ್ಲ.

20. 2 ನೇ ಆರೋಪಿ ನನ್ನ ಗಂಡನಿಗೆ ಕರೆ ಮಾಡಿ, ಸಿವಿಲ್ ಆಸ್ಪತ್ರೆಯ ಬಳಿ ಬರುವಂತೆ ತಿಳಿಸಿರುತ್ತಾನೆ. ನನ್ನ ಗಂಡ 2 ನೇ ಆರೋಪಿಯೊಂದಿಗೆ ಹೋಗಿದ್ದನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ದಿಃ 16-10-2018 ರಂದು ನನ್ನ ಗಂಡ ಮನೆ ಬಿಟ್ಟು ಹೋದ 2 ಗಂಟೆಗಳ ನಂತರ ನಾನು ಅವರ ಮೊಬೈಲ್ ಗೆ ಕರೆ ಮಾಡಿರುತ್ತೇನೆ. ದಿಃ 16-10-2018 ರಂದು ಯಾರು ಯಾರಿಗೆ ಎಷ್ಟು ಎಷ್ಟು ಬಾರಿ ಕರೆ ಮಾಡಿರುತ್ತೇನೆ ಎಂದು ಹೇಳಲಾಗುವುದಿಲ್ಲ. ಅದಲ್ಲದೇ ನಾನು ನನ್ನ ಗಂಡನಿಗೆ ಸುಮಾರು ಬಾರಿ ಮೆಸೆಜ್ ಗಳನ್ನು ಸಹ ಮಾಡಿರುತ್ತೇನೆ. ನಾನು ಕರೆ ಮಾಡಿದ ಹಾಗೂ ಮೆಸೆಜ್ ಮಾಡಿದ ವಿಷಯವನ್ನು ಪೋಲಿಸರಿಗೆ ತಿಳಿಸಿರುತ್ತೇನೆ. 2 ನೇ ಆರೋಪಿಯ ಮೊಬೈಲ್ ನಂಬರ ನನಗೆ ಈಗ ಹೇಳಲು ಬರುವುದಿಲ್ಲ, ಘಟನೆಯ ಕಾಲ್ಕೆ ಆತನ ಮೊಬೈಲ್ ನಂಬರ ನನ್ನ ಮೊಬೈಲ್ ನಲ್ಲಿ ಸೇವ್ ಆಗಿರುತ್ತದೆ. 2 ನೇ ಆರೋಪಿಯ ಮೊಬೈಲ್ ನಂಬರ ನನ್ನ ಬಳಿ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಸಂಜೆ 05-30 ಕ್ಕೆ ನನ್ನ ಗಂಡ ಮೊಬೈಲ್ ಕರೆ 2 ಬಾರಿ ಸ್ವೀಕರಿಸಿ, ಆ ಕೂಡಲೇ ಕಟ್ ಮಾಡಲಾಗಿರುತ್ತದೆ ಹಾಗೂ ಒಂದು ಮೆಸೆಜ್ ಸಹ ಬಂದಿರುತ್ತದೆ. ದಿಃ 16-10-2018 ರಂದು ಸಂಜೆ 06-00 ಗಂಟೆ ಸುಮಾರಿಗೆ ನಾನು ಚಾಸಾ-19 ರವರಿಗೆ ಕರೆ ಮಾಡಿರುತ್ತೇನೆ.

21. ಆ ದಿನ ಸಂಜೆ 07-30 ಕ್ಕೆ ನನ್ನ ತಂದೆ, ನನ್ನ ತಮ್ಮ ಹಾಗೂ ಭಾವ ಪೋಲಿಸ್ ಠಾಣೆಗೆ ಹೋಗಿ ಅದಾದ 1 ಗಂಟೆಯ ನಂತರ ಮನೆಗೆ ಬಂದಿರುತ್ತಾರೆ. ಮನೆಗೆ ಬಂದ ನಂತರ ನನ್ನ ಭಾವ ಅವರ ಮನೆಗೆ ಹೋದರು ಅದೇ ರೀತಿ ನನ್ನ ತಂದೆಯವರು ಸಹ ಅವರ ಮನೆಗೆ ಹೋದರು, ನನ್ನ ತಮ್ಮ ಆ ದಿನ ನಮ್ಮ ಮನೆಯಲ್ಲಿಯೇ ಉಳಿದುಕೊಂಡನು. ದಿಃ 17-10-2018 ರಂದು ಬೆಳಿಗ್ಗೆ ಠಾಣೆಗೆ ಹೋದಾಗ ಮನೆಯಿಂದ ದೂರನ್ನು ಬರೆದುಕೊಂಡು ಹೋಗಿರುವುದಿಲ್ಲ. ನನ್ನ ತಂದೆಯವರಿಗೆ ಕನ್ನಡ ಓದಲು-ಬರೆಯಲು ಬರುತ್ತದೆ. ದಿಃ 17-10-2018 ರಂದು ನೀಡಿದ ದೂರನ್ನು ಪೋಲಿಸ್ ಠಾಣೆಯಲ್ಲಿಯೇ ಬರೆಯಲಾಗಿರುತ್ತದೆ. ನನ್ನ ತಂದೆ ದೂರನ್ನು ನೀಡುವ ಸಮಯದಲ್ಲಿ ನನ್ನ ಗಂಡ 2 ನೇ ಆರೋಪಿ ಜೊತೆ ಹೋದ ವಿಷಯ ಗೊತ್ತಿತ್ತು. ಸದರಿ ದೂರಿನಲ್ಲಿ 2 ನೇ ಆರೋಪಿಯ ಹೆಸರನ್ನು ನಮೂದಿಸಿರುವ ಬಗ್ಗೆ

ನನಗೆ ನೆನಪಿಲ್ಲ. ಸದರಿ ದೂರಿನಲ್ಲಿ ಏನೇನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ, ಆದರೆ ಕಾಣೆಯಾದ ಬಗ್ಗೆ ದೂರನ್ನು ನೀಡಿರುತ್ತಾರೆ.

22. ಕಾಣೆಯಾದ ಬಗ್ಗೆ ನೀಡಿದ ದೂರಿನ ನಂತರ ಪೋಲಿಸರು ನನ್ನ ಬಳಿ ಯಾವುದೇ ವಿಚಾರಣೆ ಮಾಡಿರುವುದಿಲ್ಲ. ದಿಃ 17-10-2018 ರಿಂದ ದಿಃ 21-10-2018 ರ ವರೆಗೆ ಪೋಲಿಸರು ಏನು ವಿಚಾರಣೆ ಮಾಡಿದರು ಎಂದು ನನಗೆ ಗೊತ್ತಿಲ್ಲ. ಆ ಎಲ್ಲಾ ವಿಚಾರಗಳು ನನ್ನ ತಂದೆಗೆ ಗೊತ್ತಿತ್ತು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಪೋಲಿಸರು ನನ್ನ ಗಂಡನನ್ನು ಹುಡುತ್ತಿರುವ ವಿಷಯವನ್ನು ನನ್ನ ತಂದೆಯವರು ನನ್ನ ಬಳಿ ಹೇಳುತ್ತಿದ್ದರು. ದಿಃ 21-10-2018 ರಂದು ನನ್ನ ತಂದೆಯವರು 2 ನೇ ಬಾರಿ ಪೋಲಿಸ್ ಠಾಣೆಗೆ ಹೋಗಿ ದೂರನ್ನು ನೀಡಿದಾಗ ಎಷ್ಟು ಸಮಯವಾಗಿತ್ತು ಎಂದು ನನಗೆ ನೆನಪಿಲ್ಲ. ಅದೇ ರೀತಿ ಎಷ್ಟು ಗಂಟೆಗೆ ಮನೆಗೆ ಬಂದರು ಎಂದು ಸಹ ನನಗೆ ನೆನಪಿಲ್ಲ. 2 ನೇ ಬಾರಿಗೆ ನೀಡಿದ ದೂರಿನಲ್ಲಿ ಏನು ವಿಷಯಗಳನ್ನು ಬರೆದಿದೆ ಎಂದು ನಾನು ಓದಿ ತಿಳಿದುಕೊಂಡಿರುತ್ತೇನೆ. ನನ್ನ ತಂದೆಯವರು ಬಂದರು ಇಲಾಖೆಯಲ್ಲಿ ವಾಹನ ಚಾಲಕರಾಗಿ ಕೆಲಸ ಮಾಡುತ್ತಿದ್ದರು ಹಾಗೂ ಅವರ ನೌಕರಿ ಸರಕಾರಿ ನೌಕರಿಯಾಗಿರುತ್ತದೆ. ನನ್ನ ತಂದೆ ಪ್ರತಿದಿನ ಬೆಳಿಗ್ಗೆ 10-00 ಗಂಟೆ ಕೆಲಸಕ್ಕೆ ಹೋಗುತ್ತಿದ್ದರು, ಆದರೆ ಸಂಜೆ ಬರುವ ನಿರ್ದಿಷ್ಟ ಸಮಯ ಇರಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಯವರು ತಮ್ಮ ವೈಯಕ್ತಿಕ ಕೆಲಸಗಳಿಗೆ ಹೋಗಬೇಕಾದರೆ ರಜೆ ಹಾಕುತ್ತಿದ್ದರು ಎಂದರೆ ಸಾಕ್ಷಿಯು ಮೌಖಿಕವಾಗಿ ಅನುಮತಿ ಪಡೆದು ಬಂದು ಹೋಗುತ್ತಿದ್ದರು ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

23. ದಿಃ 23-10-2018 ರಂದು ಪೋಲಿಸ ಠಾಣೆಗೆ ಎಷ್ಟು ಜನರು ಹೋಗಿದ್ದರು ಎಂದು ಹೇಳಲು ಬರುವುದಿಲ್ಲ, ಆದರೆ ಸುಮಾರು ಜನರು ಹೋಗಿದ್ದರು ಎಂದು ನುಡಿಯುತ್ತಾರೆ. 2 ಮತ್ತು 3 ನೇ ಆರೋಪಿತರು ನನ್ನ ಗಂಡನನ್ನು ಕೊಲೆ ಮಾಡಿರುತ್ತಾರೆ ಎಂದು ನನ್ನ ಬಳಿ ಹೇಳಿರುವುದಿಲ್ಲ, ಆದರೆ ಈ ವಿಷಯವನ್ನು ನನ್ನ ತಂದೆ, ತಮ್ಮ ಹಾಗೂ ಭಾವ ಮತ್ತು ಪೋಲಿಸರಿಂದ ತಿಳಿದುಕೊಂಡಿರುತ್ತೇನೆ. ಆ ದಿನ ಆಕಳಗವಿ ಅರಣ್ಯ ಪ್ರದೇಶಕ್ಕೆ ಎಷ್ಟು ಜನರು ಹೋದರು ಹಾಗೂ ಬೇರೆಡೆ ಎಷ್ಟು ಜನರು ಹೋದರು ಎಂದು ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸರಿ. ನನ್ನ ಗಂಡನ ಮೃತದೇಹವನ್ನು ಮನೆಯ ಹತ್ತಿರ ತಂದಾಗ ಶವ ಕೊಳೆತ ಸ್ಥಿತಿಗೆ ಬಂದಿತ್ತು ಎಂದರೆ ಸರಿ. ಮರಣೋತ್ತರ ಪರೀಕ್ಷೆಯ ಕಾಲಕ್ಕೆ ಮೃತ ದೇಹವನ್ನು

ಕೊಯ್ಯಲಾಗುತ್ತದೆ ಎಂದರೆ ಸರಿ. ಅದೇ ರೀತಿ ದೇಹದಿಂದ ಅಂಗಾಂಗಳನ್ನು ಪಡೆದುಕೊಳ್ಳಬೇಕಾದರೆ ದೇಹವನ್ನು ಆಳವಾಗಿ ಕೊಯ್ಯಲಾಗುತ್ತದೆ ಹಾಗೂ ತಲೆ ಬುರಡೆಯನ್ನು ಭಾಗ ಮಾಡಲಾಗಿರುತ್ತದೆ ಎಂದರೆ ಸರಿ. ಮರಣೋತ್ತರ ಪರೀಕ್ಷೆಯ ಕಾಲಕ್ಕೆ ವೈದ್ಯರು ಮಾಡಿದ ಗಾಯಗಳು ನಾವು ಶವವನ್ನು ನೋಡಿದಾಗ ನಮಗೆ ಕಾಣುತ್ತಿದ್ದವು ಎಂದರೆ ಸರಿ. ಮರಣೋತ್ತರ ಪರೀಕ್ಷೆಯ ಕಾಲಕ್ಕೆ ಕೊಯ್ಡಿದ ಗಾಯಗಳನ್ನು ಹೊರತುಪಡಿಸಿ, ಬೇರೆ ಗಾಯಗಳು ಇರಲಿಲ್ಲ ಎಂದರೆ ಸರಿಯಲ್ಲ. ನಾವು ಶವವನ್ನು ನೋಡಿದಾಗ ದೇಹವು ಕೊಳೆತ ಸ್ಥಿತಿಯಲ್ಲಿದ್ದ ಕಾರಣ ಮರಣೋತ್ತರ ಪರೀಕ್ಷೆಯ ಕಾಲಕ್ಕೆ ಮಾಡಿದ ಗಾಯಗಳನ್ನು ಹೊರತುಪಡಿಸಿ ಬೇರೆ ಇನ್ನಾವುದೇ ಗಾಯಗಳು ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ. ಕೊಲೆಯಾಗಿ ತುಂಬಾ ದಿನಗಳು ಆಗಿದ್ದರಿಂದ ಮೃತ ದೇಹವು ಊದಿಕೊಂಡಿದ್ದು ಹಾಗೂ ಅಲ್ಲಲ್ಲಿ ಬಿರುಕು ಬಿಟ್ಟಿತ್ತು ಎಂದರೆ ಸರಿಯಲ್ಲ. ಪೋಲಿಸರು ಮಾತು ಕೇಳಿ ಬಿರುಕು ಬಿಟ್ಟ ಗಾಯಗಳನ್ನೇ ಕತ್ತಿಯಿಂದ ಹೊಡೆದ ಗಾಯಗಳು ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

24. 2 ಮತ್ತು 3 ನೇ ಆರೋಪಿತರು ನನ್ನ ಗಂಡನನ್ನು ಕೊಲೆ ಮಾಡಿ ಶವವನ್ನು ಅಲ್ಲಿಯೇ ಬಿಸಾಡಿ ಬಂದಿರುತ್ತಾರೆ ಎಂಬ ಆರೋಪವು ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರು ದಾಂಡೇಲಿಯ ಖಾಯಂ ವಾಸಿಗಳು ಎಂದರೆ ಸಾಕ್ಷಿಯು 2 ನೇ ಆರೋಪಿ ಕಾರವಾರದಲ್ಲಿರುತ್ತಿದ್ದ ಹಾಗೂ 3 ನೇ ಆರೋಪಿಯ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2 ನೇ ಆರೋಪಿ ಒಂದು ಸಣ್ಣ ಗೂಡ್ಸ ವಾಹವನ್ನು ಖರೀದಿಸಿ ಅಲ್ಲಿಯೇ ವಾಸವಾಗಿದ್ದ ಎಂದರೆ ಸರಿಯಲ್ಲ. ನನ್ನ ಗಂಡನ ಚೈನ್ ನ್ನು 3 ನೇ ಆರೋಪಿ ತೆಗೆದುಕೊಂಡು ಹೋಗಿದ್ದ ಎಂದು ತಿಳಿದು ಬಂತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ದಲಿತ ಸಂಘದ ಅಧ್ಯಕ್ಷನಾಗಿದ್ದ ಹಾಗೂ ಚಳುವಳಿಗಳನ್ನು ಮಾಡುತ್ತಿದ್ದ ಎಂದರೆ ಸರಿ. ಅದೇ ರೀತಿ ಸರ್ಕಾರಿ ನೌಕರರ ವಿರುದ್ಧ ಹಾಗೂ ಸಂಘ-ಸಂಸ್ಥೆಗಳ ವಿರುದ್ಧ ಸಾಕಷ್ಟು ಚಳುವಳಿಗಳನ್ನು ಮಾಡುತ್ತಿದ್ದ ಎಂದರೆ ಸರಿಯಲ್ಲ. ಕಾರವಾರ ಬಂದರಿನಲ್ಲಿ ಸಾಕಷ್ಟು ಅವ್ಯವಹಾರಗಳು ನಡೆದಿವೆ ಎಂದು ನನ್ನ ಗಂಡ ಜನರನ್ನು ಕರೆದುಕೊಂಡು ಹೋಗಿ ಚಳುವಳಿಗಳನ್ನು ಮಾಡುತ್ತಿದ್ದ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ನನ್ನ ಗಂಡನ ವಿರುದ್ಧ ಸಾಕಷ್ಟು ವೈರಿಗಳು ಇದ್ದರು ಎಂದರೆ ಸರಿಯಲ್ಲ. ನನ್ನ ಗಂಡನ ಕೊಲೆಗೂ 2 ಮತ್ತು 3 ಆರೋಪಿಳಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಪೋಲಿಸರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್. ಪರವಾಗಿ ಶ್ರೀಮತಿ ಎಸ್.ಹೆಚ್.ಜಿ. ವಕೀಲರಿಂದ.**

25. 4 ನೇ ಆರೋಪಿ ಎಂದಿಗೂ ನನಗೆ ಪರಿಚಯ ಇಲ್ಲ ಎಂದರೆ ಸರಿಯಲ್ಲ. 4 ನೇ ಆರೋಪಿಗೆ ಈ ಘಟನೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಆತನಿಗೆ ಸಂಪೂರ್ಣ ಮಾಹಿತಿ ಇತ್ತು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಆರೋಪಿ ಎಂದಿಗೂ 1 ನೇ ಆರೋಪಿಯನ್ನು ಗೋವಾಕ್ಕೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ 4 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 5 ನೇ ಆರೋಪಿ ಪರ ಶ್ರೀ ಹೆಚ್.ಎಸ್.ಎಸ್. ವಕೀಲರಿಂದ.**

26. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೋಲಿಸ್ ಠಾಣೆಗೆ ಮೊದಲ ಬಾರಿಗೆ ದಿಃ 24-10-2018 ರಂದು ಹೋಗಿರುತ್ತೇನೆ. ಆ ದಿನ ಪೋಲಿಸರು ನನ್ನಿಂದ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿಲ್ಲ. ಪೋಲಿಸರು ನನ್ನಿಂದ ಪಡೆದುಕೊಂಡು ಹೇಳಿಕೆ ಮತ್ತು ಮರು ಹೇಳಿಕೆಗಳ ದಿನಾಂಕ ನನಗೆ ಈಗ ನೆನಪಿಲ್ಲ. ಪೋಲಿಸರು ನನ್ನಿಂದ ಯಾವುದೇ ಸಹಿಗಳನ್ನು ಪಡೆದುಕೊಂಡಿಲ್ಲ. ಪೋಲಿಸರ ಮುಂದೆ ನಾನು ನೀಡಿದ ಮೊದಲನೇ ಹೇಳಿಕೆಯಲ್ಲಿ 5 ನೇ ಆರೋಪಿ ನನಗೆ ಪರಿಚಯ ಇರುತ್ತಾನೆ ಎಂಬ ಬಗ್ಗೆ ನಾನು ಹೇಳಿದ ಬಗ್ಗೆ ನನಗೆ ಈಗ ನೆನಪಿಲ್ಲ. ನನಗೆ 5 ನೇ ಆರೋಪಿ ಪರಿಚಯ ಇಲ್ಲದೇ ಇದ್ದರೂ ಸಹ ಪೋಲಿಸರ ಹೇಳಿಕೆಯ ಮೇರೆಗೆ ಚಾಸಾ-19 ರವರ ಹೇಳಿಕೊಟ್ಟಂತೆ 5 ನೇ ಆರೋಪಿ ಪರಿಚಯ ಇರುತ್ತಾನೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ 5 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
ಸಹಿ ಇದೆ/-
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ